ನಿರ್ಣಯ ತೆಗೆದುಕೊಂಡಿದೆ, ಆದಷ್ಟು ಬೇಗನೇ ಅನುಷ್ಠಾನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅತಿವೃಷ್ಟಿಯಿಂದ ಬೆಳೆನಾಶಕ್ಕೆ ಶಾಶ್ವತ ಪರಿಹಾರ ನೀಡುವುದು

137 (829) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ.(ಸಾಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶವಾದ ಸಾಗರ ತಾಲ್ಲೂಕಿನಲ್ಲಿ ಪ್ರತಿ ವರ್ಷ ಅತಿವೃಷ್ಟಿಯಿಂದ ಬೆಳೆ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅತಿವೃಷ್ಟಿಯಿಂದ ಬೆಳೆನಾಶಕ್ಕೆ ರೈತರಿಗೆ ಶಾಶ್ವತ ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಬೆಳೆ ನಾಶಕ್ಕೆ ವಿಶೇಷ ವಿಮೆ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಸಾಗರ ತಾಲ್ಲೂಕಿನಲ್ಲಿ ತಾಳಗುಪ್ಪ ಹೋಬಳಿ ಹಾಗೂ ಕಸಬಾ ಹೋಬಳಿ ಸ್ವಲ್ಪ ಭಾಗ ಪ್ರತಿ ವರ್ಷವೂ ಅತಿವೃಷ್ಟಿಯಿಂದ ಬೆಳೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಶಾಶ್ವತ ಪರಿಹಾರ ನೀಡಲು ಅವಕಾಶ ಇರುವುದಿಲ್ಲ. ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬೆಳೆನಾಶಕ್ಕೆ ಪರಿಹಾರ ನೀಡಲಾಗುತ್ತಿದೆ.

ಇ) ಸಿಆರ್‌ಎಫ್ ಮಾರ್ಗಸೂಚಿಗಳನ್ವಯ ಇರುವುದಿಲ್ಲ. ಸದ್ಯಕ್ಕೆ ಹಾಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಜಾರಿಯಲ್ಲಿರುತ್ತದೆ.

ಈ) ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಬೆಳೆನಾಶಕ್ಕೆ ಪರಿಹಾರ ನೀಡಲಾಗುತ್ತಿದೆ.

ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. : ನಾನು ಸತತವಾಗಿ ಮೂರು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ನೆರೆ ಹಾವಳಿಯಿಂದ ಹೆಚ್ಚು ಮಳೆ ಬಂದು ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿ ಮತ್ತು ಕಸಬಾ ಹೋಬಳಿಯಲ್ಲಿ ಕನಿಷ್ಠ ವರ್ಷ ಎರಡೂವರೆಯಿಂದ

ಮೂರು–ನಾಲ್ಕು ಸಾವಿರ ಎಕರೆ ಭೂಮಿ ಮುಳುಗಡೆಯಾಗಿ ಹೋಗುತ್ತಿದೆ. ಹವಾಮಾನ ವ್ಯತ್ಯಾಸದಿಂದ ಆಗಬಹುದು ಮತ್ತು ಬೇರೆ ಬೇರೆ ಬಿತ್ತನೆ ಮಾಡಿದಾಗ ಅಥವಾ ಸಸಿ ಹುಟ್ಟಿದಾಗ ಇಲ್ಲಾಂದ್ರೆ ಫಸಲು ಬರುವ ದಿವಸ ಈ ರೀತಿ ಮಳೆ ಹೆಚ್ಚು ಬಿದ್ದು ಹೋಗಿ ಬಿಡುತ್ತೆ. ಪ್ರತಿ ವರ್ಷವೂ ಈ ರೀತಿ ಪ್ರಶ್ನೆ ಕೇಳುತ್ತಿದ್ದೇನೆ, ಉತ್ತರವೂ ಸಿಗುತ್ತಿದೆ. ಹೋದ ವರ್ಷ ಒಂದು ಎಕೆಗೆ ಎಂಟುನೂರು ರೂಪಾಯಿ ಕೊಟ್ಟರು. ಒಬ್ಬ ರೈತನಿಗೆ ಎಂಟು ನೂರು ರೂಪಾಯಿ ಕೊಟ್ಟರೆ ಇಡೀ ಕುಟುಂಬ ಬೀದಿ ಪಾಲಾಗುವಂಥ ಪರಿಸ್ಥಿತಿ ಇದೆ. ಆದರೆ, ಈ ವರ್ಷ ಸರ್ಕಾರ ಆರು ಸಾವಿರ ರೂಪಾಯಿ ಕೊಡಬೇಕೆಂದು ತೀರ್ಮಾನಿಸಿದ್ದಾರೆ. ಪ್ರತೀ ವರ್ಷವೂ ಈ ರೀತಿ ನಡೆಯುತ್ತಿದೆ. ಅದಕ್ಕಾಗಿ ಹವಾಮಾನ ವ್ಯತ್ಯಾಸದಿಂದಾಗುವ ವಿಮೆಯನ್ನು, ಅಲ್ಲಿಯ ಪರಿಸ್ಥಿತಿಗನು ಗುಣವಾಗಿ ಅಲ್ಲಿನ ಎರಡರಿಂದ ಎರಡೂವರೆ ಸಾವಿರ ಎಕರೆ ಜಮೀನಿಗೆ ಪ್ರತಿ ವರ್ಷ ಈ ತೊಂದರೆಯಾಗಿರುವುದರಿಂದ ಒಂದು ಹೊಸ ವಿಮೆ ಯೋಜನೆಯನ್ನು ಮಾಡಿ ಕೊಟ್ಟರೆ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ, ಇದರ ಬಗ್ಗೆ ಸರ್ಕಾರ ಏನು ತೀರ್ಮಾನಿಸಿದೆ ಎಂದು ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸಾಗರ ತಾಲ್ಲೂಕಿನ ಆ ಪ್ರದೇಶದಲ್ಲಿ ಪ್ರತಿವರ್ಷ ಅತಿವೃಷ್ಟಿಯಿಂದ ಬೆಳೆ ನಾಶವಾಗುತ್ತದೆ ಎನ್ನುವ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಆ ರೀತಿ ಅತಿವೃಷ್ಟಿಯಿಂದ ಬೆಳೆ ನಷ್ಟವಾಗುತ್ತಿರುವುದು, ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಆದರೆ, ಅವರು ಇದಕ್ಕೆ ಶಾಶ್ವತ ಪರಿಹಾರ ನೀಡಬೇಕೆನ್ನುವಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ಇವತ್ತು ಕಂದಾಯ ಇಲಾಖೆಯ ಮುಖಾಂತರ ಕೊಡಬೇಕಾದರೆ CRF ಮುಖಾಂತರ ಏನು ಕೆಲವೊಂದು norms ಇವೆ, ಆ ಹಿನ್ನೆಲೆಯಲ್ಲಿ ಆಯಾ ಸಂದರ್ಭದಲ್ಲಿ ಬೆಳೆ ಏನು ನಷ್ಟವಾಗುತ್ತದೆ, ಅಲ್ಲಿದ್ದಂಥ ಕಂದಾಯ ಅಧಿಕಾರಿಗಳು, ಕೃಷಿ ಅಧಿಕಾರಿಗಳು ಕೂಡಿಕೊಂಡು ಏನೊಂದು ಸರ್ವೆ ಮಾಡುತ್ತಾರೆ, ಯಾವ ರೀತಿಯಾಗಿ ನಷ್ಟವಾಗಿದೆ, ಅದರ ಮೇಲೆ CRFನ guidelines ಪ್ರಕಾರ ನಾವು ಪರಿಹಾರವನ್ನು ಕೊಡುತ್ತೇವೆ. ಬಹಳ ಪ್ರಮುಖವಾಗಿ ಇರುವಂಥದ್ದು ಏನೆಂದರೆ, ಕಳೆದ ತಿಂಗಳು 27ನೇ ತಾರೀಖು ಕೇಂದ್ರ ಸರ್ಕಾರ ಈ CRF guidelines ಏನಿವೆ, ಆ guidelines ಪ್ರಕಾರ ಏನು ಪರಿಹಾರಧನ ಕೊಡುವಂಥ ಪದ್ಧತಿ ಇತ್ತು, ಅದನ್ನು ಹೆಚ್ಚಿಗೆ ಮಾಡಿದ್ದಾರೆ. ಈ ಹಿಂದೆ 800 ರೂಪಾಯಿಗಳನ್ನು ಕೊಡುತ್ತಿದ್ದರು ಎನ್ನುವ

ಮಾತನ್ನು ಹೇಳಿದಿರಿ. ಈಗ ಅದನ್ನು ಹೆಚ್ಚು ಮಾಡಿದ್ದಾರೆ. ಹೀಗಾಗಿ ಆ ಸಂದರ್ಭದಲ್ಲಿ ಹೆಚ್ಚು ಪರಿಹಾರ ಕೊಡುವ ವ್ಯವಸ್ಥೆಯನ್ನು ನಾವು ಮಾಡಬಹುದು. ಇನ್ನು ಬೆಳೆ ವಿಮೆ ಬಗ್ಗೆ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಈ ರೀತಿ ಬೆಳೆ ವಿಮೆಯನ್ನು ಮಾಡಿಸಿ ಅದರ premium ಅನ್ನು ತುಂಬಿದರೆ ಅದರ ಮುಖಾಂತರ ಹೆಚ್ಚಿನ ಹಣವು ರೈತರಿಗೆ ಸಿಗಲಿಕ್ಕೆ ಸಾಧ್ಯವಿದೆ. ಹೀಗಾಗಿ ನಮ್ಮ ಕಂದಾಯ ಇಲಾಖೆ ವ್ಯಾಪ್ತಿಯೊಳಗೆ ಕೇವಲ ನಾವು ಆ CRF norms ಪ್ರಕಾರ ಪರಿಹಾರ ಧನ ಕೊಡುವಂಥದ್ದು ಮಾತ್ರ ನಮ್ಮ ವ್ಯಾಪ್ತಿಗೆ ಇದೆ. ಅದರ ಪ್ರಕಾರ ಈ ಸಂದರ್ಭದಲ್ಲಿ ಪರಿಹಾರಧನವನ್ನು ಕೊಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು : ಇದು ಪ್ರತೀ ವರ್ಷ ನಡೆಯುತ್ತಿದೆ. ಕಳೆದ ವರ್ಷ 800 ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೇಸಿಗೆ ಬೆಳೆ ಬೆಳೆಯುವುದಕ್ಕಾಗುವುದಿಲ್ಲ. ಅಲ್ಲಿ ರೈತರ ಸಮಸ್ಯೆ ಇದೆ. ಹೀಗಿದ್ದಾಗ ರೈತ ಆತ್ಮಹತ್ಯೆ ಮಾಡಿಕೊಳ್ಳದೇ ಇನ್ನೇನು ಮಾಡುತ್ತಾನೆ? ದಯವಿಟ್ಟು ಅದಕ್ಕೊಂದು package ತರಹ ಮಾಡಿಕೊಡಬೇಕು. ಹಾಗೆಯೇ ಈ ಸಾರಿ ನೀವು ಒಬ್ಬ ರೈತರ ಕುಟುಂಬಕ್ಕೆ ಒಂದು ಎಕರೆಗೆ ಎಷ್ಟು ಪರಿಹಾರ ಕೊಡುತ್ತೀರಿ ಎನ್ನುವುದನ್ನು ಸಹ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಖಾಯಂ ಆಗಿ ಪರಿಹಾರ ಸಿಗುವಂಥ ದ್ದಾದರೆ ಅದನ್ನು ನಾವು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳ ಜೊತೆ ಕುಳಿತು ಸಮಾಲೋಚನೆ ಮಾಡಿಕೊಂಡು ಅದಕ್ಕೆ ಯಾವ ರೀತಿ ಪರಿಹಾರ ಕೊಡಬೇಕೆನ್ನುವುದನ್ನು ವಿಚಾರ ಮಾಡುತ್ತೇವೆ. ಆ ರೈತರಿಗೆ ಇನ್ನು ಹೆಚ್ಚು ಅನುಕೂಲವಾಗಬೇಕಾದರೆ ಈ ಕೃಷಿ ವಿಮೆಯನ್ನು, ಬೆಳೆ ವಿಮೆಯನ್ನು ಆ ಯೋಜನೆಯೊಳಗೆ ಮಾಡಿಸಿದರೆ ಬಹಳ ಅನುಕೂಲವಾಗುತ್ತದೆ. ಈ ವರ್ಷ ಏನು ಹೆಚ್ಚು ನಷ್ಟವಾಗಿದೆ, ಅದರ ಬಗ್ಗೆ ಹೆಚ್ಚು ಪರಿಹಾರಧನವನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಏಕೆಂದರೆ, CRF norms ಪ್ರಕಾರ ಹೆಚ್ಚು ಪರಿಹಾರ ಕೊಡಲಿಕ್ಕೆ ಅವಕಾಶವಿದೆ. ಅದರ ಪ್ರಕಾರ ಹೆಚ್ಚು ಪರಿಹಾರ ಧನವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.